ಪಡಸಾಲೆಯಲ್ಲಿ ಮುಂದಕ್ಕೆ ನಡೆಯತೊಡಗಿದೆ. ನನ್ನ ಬೂಟಿನ ಶಬ್ದ ಬಿಟ್ಟರೆ ಎಲ್ಲವೂ ನಿಶ್ಶಬ್ದವಾಗಿತ್ತು.

ಆದರೂ, ಈ ದುರ್ಗದ ಅರಮನೆಯನ್ನು ಈ ಮೂವರು ವಿಕ್ಷಿಪ್ತ ಮುದುಕರ ಸುಪರ್ದಿಗೆ ಒಪ್ಪಿಸಿರುವ ಆ ಮನೆಯೊಡತಿ ಮತ್ತು ಆ ಮೂವರೂ, ಅವರು ಕುಳಿತಿರುವ ಬೆಂಕಿಗೂಡಿನ ಕೋಣೆಯಲ್ಲಿದ್ದ ಪುರಾತನ ಪೀಠೋಪಕರಣಗಳೂ, ಎಂದೋ ಸಂದು ಹೋದ ಮಾಟಗಾತಿಯರ, ದೆವ್ವಗಳ ಅತೀಂದ್ರಿಯ ವಿದ್ಯಮಾನಗಳು ಜರಗುತ್ತಿದ್ದ ಕಾಲಕ್ಕೆ ಅಂದರೆ ಪ್ರೇತಗಳು ಪ್ರಚಲಿತವಿದ್ದ ಕಾಲಕ್ಕೆ ಸೇರಿದ್ದವೆಂದು ನನಗನಿಸತೊಡಗಿತು. ನಾನು ನಡೆಯುತ್ತಿದ್ದ ಪಡಸಾಲೆಯೂ ಅದರದೊಂದು ವಿಸ್ತೃತ ಭಾಗವೆಂಬ ಆಲೋಚನೆಗಳು ನನ್ನನ್ನು ಮುತ್ತತೊಡಗಿದವು. ಆದರೂ ಅಂಥ ನಕಾರಾತ್ಮಕ ಆಲೋಚನೆಗಳನ್ನು ಕಿತ್ತೊಗೆದು ನಡೆಯತೊಡಗಿದೆ. ಸುರುಳಿ ಮೆಟ್ಟಿಲುಗಳನ್ನು ಹತ್ತಿ ಎರಡನೇ ಅಂತಸ್ತಿಗೆ ಮುಟ್ಟಿದೆ. ನಡೆದಷ್ಟೂ ಮುಗಿಯದಂತಿದ್ದ ಪಡಸಾಲೆಯೊಳಗೆ ಮೈ ಚುರ್ ಅನ್ನುವಂತೆ ತಣ್ಣನೆಯ ಗಾಳಿ ಬೀಸುತ್ತಿತ್ತು. ಹೊಯ್ದಾಡುತ್ತಿದ್ದ ಮೇಣದ ಬತ್ತಿಯ ಹಳದಿ ಜ್ವಾಲೆಯಲ್ಲಿ ಗೋಡೆಗಳ ಮೇಲೆ ಮೂಡುವ ರಾಕ್ಷಸಾಕಾರದ ನೆರಳುಗಳು ನನ್ನನ್ನು ಹಿಂಬಾಲಿಸುತ್ತಾ, ಮುನ್ನುಗ್ಗುತ್ತಾ ದಿಗಿಲು ಹುಟ್ಟಿಸುವಂತಿದ್ದವು. ನನ್ನ ಬೂಟಿನ ಸಪ್ಪಳ ಹಲವು ಕಡೆಯಿಂದ ಪ್ರತಿಧ್ವನಿಸುತ್ತಾ ಅವು ನನ್ನವೆಯೇ ಇಲ್ಲ ಮತ್ತಷ್ಟು ಜನ ನನ್ನನ್ನು ಹಿಂಬಾಲಿಸುತ್ತಿದ್ದಾರೋ ಎಂಬ ಭ್ರಮೆ ಹುಟ್ಟಿಸುತ್ತಿತ್ತು. ಕೊನೆಗೂ ಹಸಿರು ಬಾಗಿಲಿನ ಬಳಿಗೆ ತಲುಪಿದೆ. ನನ್ನ ಹಿಂಬದಿಯಲ್ಲಿ ಏನೋ ಸರಿದಾಡಿದಂತಾಗಿ ಮತ್ತೆ ಸಂಪೂರ್ಣ ಮೌನ ಆವರಿಸಿಕೊಂಡಿತು. ಒಂದು ದೀರ್ಘ ಶ್ವಾಸವನ್ನೆಳೆದು ಕೆಂಪು ಕೋಣೆಯ ಹಸಿರು ಬಾಗಿಲನ್ನು ತಳ್ಳಿದೆ.

ಬಾಗಿಲು ತೆರೆಯುತ್ತಿದ್ದಂತೆಯೇ ಮೆಟ್ಟಿಲುಗಳ ಮೇಲಣ ದೊಡ್ಡ ಇಳಿದಾಣದ ಮೇಲಿನ ದೊಡ್ಡ ಕಿಟಕಿಯು ಹಾಲು ಬೆಳದಿಂಗಳು ಪಡಸಾಲೆಯ ಉದ್ದಕ್ಕೂ ಹರಡಿ ಅಲ್ಲಿ ಅಡಗಿದ್ದ ಎಲ್ಲಾ ವಸ್ತುಗಳು ಕಪ್ಪು ಬಿಳುಪು ಬೆಳಕಿನಾಟದಲ್ಲಿ ಮಿಂದು, ಎದ್ದು ಕಾಣುತ್ತಿದ್ದವು. ಎಲ್ಲವೂ ಎಷ್ಟೊಂದು ಅಚ್ಚುಕಟ್ಟಾಗಿ ಕಾಣಿಸುತ್ತಿದ್ದವೆಂದರೆ ಅವರು ಹೇಳಿದಂತೆ ದುರ್ಗದ ಮನೆಯು ಒಂದು ವರ್ಷದ ಹಿಂದೆ ಖಂಡಿತವಾಗಿಯೂ ಅಲ್ಲ, ನಿನ್ನೆ ಮೊನ್ನೆಯೋ ಖಾಲಿ ಮಾಡಿದಂತೆ ಕಾಣಿಸುತ್ತಿತ್ತು. ಗೋಡೆಗಳ ಮೇಲಿನ ದೀಪದ ಹಿಡಿಕೆಗಳಲ್ಲಿ ಹೊಚ್ಚ ಹೊಸ ಮೇಣದ ಬತ್ತಿಗಳು ಕಾಣುತ್ತಿದ್ದವು. ನನ್ನ ಬತ್ತಿಯ ಬೆಳಕಿಗೆ ಎಲ್ಲೂ ದೂಳು ಕಾಣುತ್ತಿರಲಿಲ್ಲ. ಇದ್ದರೂ ಕಾಣಿಸುತ್ತಿರಲಿಲ್ಲ. ನಾನು ಮುಂದೆ ಹೆಜ್ಜೆ ಹಾಕಲಿದ್ದವನು ಎಂತಾದ್ದೋ ಕಣ್ಣನ್ನು ಸೆಳೆದಂತಾಗಿ ತಟ್ಟನೆ ನಿಂತು ಇಳಿದಾಣದ ಮೂಲೆಯ ಮೇಲೆ ಕಣ್ಣು ಹಾಯಿಸಿದೆ. ಅದೊಂದು ಹಿತ್ತಾಳೆಯ ಮೂರ್ತಿ. ಗೋಡೆಗೆ ಹೊದಿಸಿದ್ದ ಬಿಳಿ ಬಣ್ಣದ ತಡಿಕೆಯ ಮೇಲಿಂದ ಅದರ ನೆರಳು ಯಾರೋ ನನ್ನ ಮೇಲೆ ಆಕ್ರಮಣಕ್ಕೆ ಸಿದ್ಧಗೊಂಡಿರುವಂತೆ ಕಾಣಿಸುತ್ತಿತ್ತು. ಅಪ್ರಜ್ಞಾಪೂರ್ವಕವಾಗಿ ನನ್ನ ಕೈ ರಿವಾಲ್ವರಿನ ಜೇಬನ್ನು ತಡಕಾಡಿತು. ಅರೆಕ್ಷಣ ಹಾಗೇ ನಿಂತು ಮತ್ತೆ ಮುಂದಕ್ಕೆ ಹೆಜ್ಜೆ ಹಾಕಿದೆ. ಎದುರಿಗೆ ಗ್ರೀಕ್ ದೇವತೆಗಳಿಗೆ ಮದಿರೆಯ ಲೋಟವನ್ನು ಹಿಡಿದಿರುವ ಯುವಕ ಗ್ಯಾನಿಮೀಡ್ ಮತ್ತು ಒಂದು ಹದ್ದಿನ ವಿಗ್ರಹ ಬೆಳದಿಂಗಳಿಗೆ ಹೊಳೆಯುತ್ತಿದ್ದವು. ಮುಂದುವರೆದಂತೆ ಇನ್ನೂ ಕೆಲವು ವಿಗ್ರಹಗಳನ್ನು ಕಂಡು ಉದ್ವೇಗಗೊಂಡಿದ್ದ ಮನಸ್ಸು ಶಾಂತವಾಗತೊಡಗಿತು.

ಕೊನೆಗೂ ಕೆಂಪು ಕೋಣೆಯ ಬಳಿ ತಲುಪಿದೆ... ಕೆಂಪು ಕೋಣೆ ಮತ್ತು ಅದನ್ನು ಏರುವ ಮೆಟ್ಟಿಲುಗಳು ಕೊಂಚ ಕತ್ತಲೆಯಲ್ಲಿದ್ದವು. ಬಾಗಿಲನ್ನು ತೆರೆಯುವ ಮುನ್ನ ಮೇಣದ ಬತ್ತಿಯನ್ನು ಒಮ್ಮೆ ಸುತ್ತಲೂ ತಿರುಗಿಸಿ ಎಲ್ಲೆಲ್ಲಿ ಏನೇನಿದೆ ಎಂದು ಗಮನಿಸಿದೆ. ಕೆಂಪು ಕೋಣೆಯನ್ನು ನನಗಿಂತಲೂ ಮೊದಲು ಹತ್ತಿದವನ ವೃತ್ತಾಂತವು ನನ್ನ ಮನಸ್ಸಿನಲ್ಲಿ ಇನ್ನೂ ಹಸಿಹಸಿಯಾಗಿತ್ತು. ನೆನಪಾಗುತ್ತಲೇ ಆತಂಕದಿಂದ ಒಮ್ಮೆ ಹಿಂದಿರುಗಿ ನೋಡಿದೆ. ಗ್ಯಾನಿಮೀಡನನ್ನು ಬಿಟ್ಟರೆ ಮತ್ತೇನೂ ಕಾಣಿಸಲಿಲ್ಲ...